SRI N. CHIKKE GOWDA.— There is no law under which the State Government can compel any dealer to sell the fertiliser at the lower price. To that extent there was no option for us. The Government of India had sent us a telegram in this regard. I shall read it for the benefit of the House. The price of urea is fixed at Rs. 1,980. This telegram is in consonance with the Fertiliser Control Order. When the order has been communicated to us the prices would automatically come into force. I request the Hon Leader of the Opposition to indicate me any order or rule by which we can compel any dealer or any other agency to sell it at the lower rate. This order has come into effect just like the like in price of pertol and other luxury goods. The prices wouldcome into effect on the day on which it is announced. When the Government ofIndia raise any price, we cannot question them In the same way I cannot issue any order to sell the fertiliser at the old rate.

Whatever I have stated in the House and also the relevant papers I have laid when I have answered to that statement, I have not misled the House and I have not thus committed breach of privilege. I therefore request the Hon. Speaker to disallowthe berach of privilege motion.

ಶ್ರೀ ಎಚ್. ಡಿ. ದೇವೇಗೌಡ.— ನಾನು ಆವೊತ್ತೇ ಹೇಳಿದ್ದೇನೆ. ಈಗ ತಾವು ದಯಮಾಡಿ ಹೇಳ್ರಿ ಇದು, ಪ್ರಿವಿಲೇಜ್ ಕಮಿಟಿಗೆ ಹೋಗಬೇಕು.

ಅಧ್ಯಕ್ಷರು.— ಆವೊತ್ತು ಮಾನ್ಯಸದಸ್ಯರು ಕೇಳಿದಾಗ ನಾನೂ ಕೂಡ ಚೇರ್‌ನಲ್ಲಿ ಇದ್ದೆ.

ಶ್ರೀ ಎಚ್. ಡಿ. ದೇವೇಗೌಡ.— ಆದುದರಿಂದ ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾತಿ.

ಅಧ್ಯಕ್ಷರು.— ನಾಳೆ ಇದರ ಬಗ್ಗೆ ರೂಲಿಂಗ್ ಕೊಡುತ್ತೇನೆ.

Stainles Steel allotment issue.

ಶ್ರೀ ಎಚ್. ಡಿ. ದೇವೇಗೌಡ.— ಇನ್ನೊಂದು ವಿಷಯ ಏನೆಂದರೆ ಸ್ಟೈನ್‌ಲೆಸ್ ಸ್ಟೀಲ್ ಪ್ರಕರಣದ ಬಗ್ಗೆ ಶ್ರೀಮಾನ್ ಎಸ್. ಎಂ. ಕೃಷ್ಣರವರು ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದ್ದರು. ನಾಳೆಯೆ ಕೊನೇ ದಿನವಾದುದರಿಂದ ಎಷ್ಟು ಕೆಲಸ ಆಗುತ್ತದೋ ಅಷ್ಟು ಆಗಲಿ. ಆ ಬಗ್ಗೆ ನಾಳೆ ಸ್ಟೇಟ ಮೆಂಟ್ ಮಾಡುತ್ತಾರೆಯೋ ?

SRI S. M. KRISHNA.— I have got the report. I will be making a statement tomorrow.

Bill relating to Independence of The Legislature Secretariat

ಶ್ರೀ ಹೆಚ್. ಡಿ. ದೇವೇಗೌಡ — ಇನ್ನೊಂದು ಮುಖ್ಯವಾದ ವಿಷಯ. ಸರ್ಕಾರದವರು ದುಡ್ಡು ಬರುವ ಬಿಲ್ಲನ್ನು ಅತುರದಿಂದ ಕಾತುರದಿಂದ ಇಂಟ್ರಡ್ಯೂಸ್ ಮಾಡುತ್ತಾರೆ. ಆದುದರಿಂದ ನಾನು ತಮ್ಮಲ್ಲಿ ಮುಖ್ಯವಾಗಿ ಕೇಳುವುದು ಲೆಜಿಸ್ಲೇಚರ್ ಇಂಡಿಪೆಂಡೆನ್ಸ್ ಬಗ್ಗೆ ಏನು ಮಾಡುತ್ತೀರಿ ? ಅದನ್ನು ಮೊದಲು ಹೇಳಬೇಕು. ನಾನು ಕಾನ್‌ಸ್ಟಿಟ್ಯೂಷನಲ್ ಪಾಯಿಂಟ್‌ನ್ನು ರೈಸ್ ಮಾಡುವುದಕ್ಕೆ ಹೋಗುವುದಿಲ್ಲ. ತಾವು ಈಪೊತ್ತಿನ ಅಜೆಂಡಾದಲ್ಲಿ ಫೈನಾನ್ಸ್ ಬಿಲ್‌ನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಹಾಕಿ

ದ್ದೀರಿ. ಆದುದರಿಂದ ನಾನು ಈ ವಿಷಯದಲ್ಲಿ ಮುಖ್ಯವಾಗಿ ಹೇಳುವುದು ನಾಳೆ ದಿವಸ ಈ ಲೆಜಿಸ್ಲೇಚರ್ ಇಂಡಿಪೆಂಡೆನ್ಸ್ ಬಿಲ್ಲನ್ನು ಈ ಸಭೆಯ ಮುಂದೆ ಇಡುತ್ತೇವೆ ಎಂದು ಸರ್ಕಾರ ಮುಂದೆ ಬಂದಿ ಈಗ ಸರ್ಕಾರದವರು ತಂದಿರುವ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಲಿ. ನಾಳೆ ದಿವಸ ಈ ಬಿಲ್‌ನ್ನು ತರುತ್ತೇವೆ ಎಂದು ಹೇಳಿರಿ.

ಶ್ರೀ ಎಸ್. ಎಂ. ಕೃಷ್ಣ.— ಲೆಜಿಸ್ಲೇಚರ್‌ನ್ನು ಇಂಡಿಪೆಂಡೆಟ್ ಆಗಿ ಮಾಡುವುದಿಲ್ಲ ಅನ್ನುವ ಪ್ರಶ್ನೆ ಇದರಲ್ಲಿ ಬರುವುದೇ ಇಲ್ಲವಲ್ಲಾ.

ಶ್ರೀ ಎಚ್. ಡಿ. ದೇವೇಗೌಡ.— ಲೆಜಿಸ್ಲೇಚರ್‌ನ್ನು ಇಂಡಿಪೆಂಡೆಟ್ ಆಗಿ ಮಾಡುತ್ತೇವೆ ಎಂದರಿ ಹಿಂದೆ ತಾವು ಒಪ್ಪಿಕೊಂಡಿದೀರಿ. ಆದುದರಿಂದ ಇಂಡಿಪೆಂಡೆನ್ಸ್ ಆಫ್ ಲೆಜಿಸ್ಲೇಚರ್ ಸೆಕ್ರೆಟೇರಿಯೇಟ್ ಬಿಲ್ಲನ್ನು ನಾಳೆ ತಂದು ಪಾಸು ಮಾಡುತ್ತೇವೆ ಎಂದು ಹೇಳಿದರೆ ಏನೂ ಚರ್ಚೆ ಇಲ್ಲದೆ ನಾವು ಈ ಬಿಲ್ಲನ್ನು ಪಾಸು ಮಾಡುತ್ತೇವೆ. ನಾಳೆ ದಿವಸ ಈ ಬಿಲ್ಲು ತರುತ್ತೀರಾ ?

12-00 NOON

ಶ್ರೀ ಎಸ್. ಎಂ. ಕೃಷ್ಣ — ಅಧ್ಯಕ್ಷರೇ, ತಮಗೆ ಇದು ಗೊತ್ತಿರುವ ಹಾಗೆ ಇದರ ಬಗ್ಗೆ ಒಂದು ಮೀಟಿಂಗ್‌ನ್ನು ೧೧ ಘಂಟೆಗೆ ಕರೆಯಲಾಗಿತ್ತು. ಈಗ ೧೨ ಗಂಟೆಗೆ ಮತ್ತೆ ಮೀಟಿಂಗು ಸೇರುವುದಿದೆ. ಆಗ ಇದರ ಬಗ್ಗೆ ಚರ್ಚೆ ಮಾಡಬಹುದು. ನೀವೇ ಇದಕ್ಕೂ ಒಪ್ಪಿದ್ದಿರಿ.

ಅಧ್ಯಕ್ಷರು.— ನನ್ನ ಮೇಲೆ ಇದರ ಬಗ್ಗೆ ಏನನ್ನೂ ಹಾಕಬೇಡಿ.

ಶ್ರೀ ಹೆಚ್. ಡಿ. ದೇವೇಗೌಡ.— ನಮ್ಮ ವಿಧಾನ ಮಂಡಲಕ್ಕೆ ಸ್ವಾತಂತ್ರ್ಯವಿರಬೇಕೆಂದು ಬಹಳ ದಿನಗಳಿಂದಲೂ ಹೇಳುತ್ತಲೇ ಬರುತ್ತಿದ್ದೇವೆ ಮತ್ತು ಬೇರೆ ಬೇರೆ ರಾಜ್ಯಗಳಲ್ಲೂ ಕೂಡ ವಿಧಾನ ಮಂಡಲ ಪ್ರತ್ಯೇಕವಾದ ಇಂಡಿಪೆಂಡೆಟ್ ಸೆಕ್ರಟೇರಿಯೆಟ್ ಆಗಿದೆ. ಆದರಂತೆ ನಮ್ಮ ರಾಜ್ಯದ ಶಾಸನ ಸಭೆಗಳೂ ನಡೆಯಲು ಅನುಕೂಲವಾಗುವಂತೆ ಇಲ್ಲೂ ಇಂಡಿಪೆಂಡೆಂಟ್ ಮಾಡಬೇಕು. ಅದಕ್ಕೆ ಅವಶ್ಯಕವಾದ ಬಿಲ್ಲನ್ನು ತರುತ್ತೇವೆಂದು ತಾವೂ ಹೇಳುತ್ತಿದ್ದೀರಿ. ನಮ್ಮ ವಿಧಾನ ಮಂಡಲಕ್ಕೆ ಸ್ವಾತಂತ್ರ್ಯವಿರಬೇಕು ಎನ್ನುವುದು ನಮ್ಮಗಳ ಆಸೆ. ಸರ್ಕಾರ ಇದನ್ನು ಒಪ್ಪಿಕೊಂಡಿದೆ. ಇದಕ್ಕಾಗಿ ನಾನು ಮಾನ್ಯ ಮಂತ್ರಿಗಳಿಂದ ಒಂದು ಆಶ್ವಾಸನೆ ಕೇಳುತ್ತೇನೆ. ನಾಳೇನೇ ಇದರ ಬಿಲ್ಲನ್ನು ತಂದು ಇಲ್ಲೇ ಅದನ್ನು ಖಂಡಿತವಾಗಿ ಪಾಸು ಮಾಡುತ್ತೇವೆಂದು ಹೇಳಿದರೆ ನಾನು ವಿರೋಧ ಪಕ್ಷದ ಪರವಾಗಿ ಸಂಪೂರ್ಣ ಸಹಕಾರ ಕೊಡುತ್ತೇನೆ ಮತ್ತು ಪಾಸು ಮಾಡಿಸಿ ಕೊಡುತ್ತೇನೆ. ಹಾಗಿತದೆ ಸುಮ್ಮನೆ ಬಿಲ್ಲು ತಂದು ಇಲ್ಲಿ ಇಂಟ್ರೊಡ್ಯೂಸು ಮಾಡಿ ಕಾಲಹರಣ ಮಾಡಬೇಕೆಂದು ತರುವುದಾಗಿದ್ದರೆ ಇದಕ್ಕೆ ಖಂಡಿತ ನಾವು ಈಗ ಅವಕಾಶ ಕೊಡುವುದಿಲ್ಲ. ಇದನ್ನು ವಿರೋಧ ಮಾಡುತ್ತೇವೆ. ನಾಳೇ ದಿನವೇ ನಿರ್ಧಾರವಾಗಿ ಬಿಲ್ ತಂದು ಪಾಸು ಮಾಡುತ್ತೇವೆಂದು ಹೇಳಿದರೆ ನಾವು ಒಪ್ಪುತ್ತೇವೆ. ಇಲ್ಲದಿದ್ದರೆ ಇದನ್ನು ತರಬೇಕಾಗಿಲ್ಲ.

ಶ್ರೀ ಎಂ ಎಸ್. ಕೃಷ್ಣನ್.— ಸ್ವಾಮಿ, ತಾವೂ ಕೂಡ ಅದಷ್ಟು ಬೇಗ ಇಂತಹ ಒಂದು ಬಿಲ್ಲನ್ನು ತರುತ್ತೇವೆಂದು ಹೇಳಿದ್ದಿರಿ ಮತ್ತು ಆಶ್ವಾಸನೆಯನ್ನೂ ಕೊಟ್ಟಿದ್ದಿರಿ, ಇವಕ್ಕಾಗಿ ಅಧ್ಯಕ್ಷರೂ ಕೂಡ ಒಪ್ಪಿದ್ದರು. ಅದು ಬಿಟ್ಟು ಸುಮ್ಮನೆ ಇಲ್ಲಿ ಬಿಲ್ ಇಂಟ್ರೊಡ್ಯೂಸ್ ಮಾಡಬೇಕೆಂದು ಇಂಟ್ರೊಡ್ಯೂಸ್ ಮಾಡಿ ಕಾಲ ತಳ್ಳುವಂತೆ ಮಾಡಬೇಡಿ. ಇದನ್ನು ಮಾಡಬೇಕೆಂದು ಹಿಂದೇನೇ ನಿರ್ಣಯ ಮಾಡಿದೀರಿ

ಶ್ರೀ ಎಚ್. ಡಿ. ದೇವೇಗೌಡ — ಇಂತಹ ಒಂದು ಸ್ವಾತಂತ್ರ್ಯವನ್ನು ವಿಧಾನ ಮಂಡಲಕ್ಕೆ ಕೊಡಬಹುದು ಎಂದು ನಿರ್ಣಯ ಕೂಡ ಇದೆ. ಈಗೇನೋ ಮಾನ್ಯ ಮಂತ್ರಿಗಳು ಹೇಳಬಹುದು. ನಾಳೆ ಸೆಷನ್ ಮುಗಿದ ಮೇಲೆ ಕಮಿಟಿಗಳು ಕೆಲಸ ಆರಂಭ ಮಾಡುತ್ತವೆ. ಆಗ ನಮಗೆ ಎಷ್ಟು ಕಷ್ಟಗಳಿವೆ ಎನ್ನುವುದ ಗೊತ್ತು, ನಾನೇ ಹೇಳಬೇಕಾದರೆ ಕೆಲವು ಡಿಪಾರ್ಟ್‌ಮೆಂಟುಗಳು ಅವರ ನೋಟುಗಳನ್ನು ಇನ್ನೂ ಕಳಿಸಿಲ್ಲ. ಸುಮಾರು ೩೫-೪೦ ಇಲಾಖೆಗಳ ಫೈಲುಗಳು ಬಂದಿಲ್ಲ. ಲೆಜಿಸ್ಲೇಚರು ಕಮಿಟಿಗಳಂ ಹೀಗಾದರೆ ಕೆಲಸಗಳನ್ನು ಮಾಡಲು ಕಷ್ಟವಾಗುತ್ತದೆ. ನಮ್ಮ ದೃಷ್ಟಿಯಲ್ಲಿ ಸಭೆ ಕಾರ್ಯಕಲಾಗಳು ಚೆನ್ನಾಗಿ ಆಗಬೇಕು ಎಂದು ಇದೆ.

SRI S. M. KRISHNA.— Madam Speaker, an impression is sought to be created that I am the accused. I have repeatedly made it clear that it is the intention of the Government and the Government is committed itself to the principle that the Legislature must be

independent of the executive. We have also shown our bona fides by holding a meeting by asking the Law Department to come out with a draft Bill so that could be scrutinised at the meeting to be held to-day.

SRI H. D. DEVE GOWDE.— On 16th itself it was to have been scrutinised.

SRI S. M. KRISHNA.—Madam Speaker on that day in fact I walked into your Chamber with the Bill, but unfortunately the Leader of Opposition was not there.

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ) — ಮಾನ್ಯ ಅಧ್ಯಕ್ಷರೇ, ಮಾನ್ಯ ಪಾರ್ಲಿಮೆಂಟರಿ ಮಂತ್ರಿಗಳು ಇಲ್ಲಿರುವುದರಿಂದ ತಮ್ಮ ಗಮನಕ್ಕೆ ಒಂದು ವಿಚಾರ ಇಲ್ಲಿ ತರಬೇಕಾಗಿದೆ. ನಾವು ಕಳೆದ ಹದಿನೈದು ದಿನಗಳ ಹಿಂದೆ ಸರಕಾರದ ಗಮನವನ್ನು ಇಲ್ಲಿ ಸೆಳೆದಿದ್ದೆವು. ಆದು ನಮ್ಮ ವಿಧಾನ ಮಂಡಲದ ಸಿಬ್ಬಂದಿ ವರ್ಗದವರಿಗೆ ಬೋನಸ್ಸನ್ನು ಕೊಡುವ ವಿಚಾರ ಬಗ್ಗೆ. ಇಲ್ಲಿರುವ ಅಧಿಕಾರಿಗಳು ಬೆಳಗಿನಿಂದ ರಾತ್ರಿಯವರೆಗೆ ಪುರಸೊತ್ತಿಲ್ಲದೆ ಕೆಲಸಗಳನ್ನು ಮಾಡುತ್ತಿದ್ದಾರೆ. ಇಂತಹ ಸಿಬ್ಬಂದಿ ವರ್ಗದವರಿಗೆ ಒಂದು ತಿಂಗಳ ಸಂಬಳವನ್ನು ಬೋನಸ್ಸಾಗಿ ಕೊಡಬೇಕೆಂದು ಕೇಳಿದೆವು. ಆಂಧ್ರ ಪ್ರದೇಶದ ಸರಕಾರದಲ್ಲಿರುವ ವಿಧಾನ ಮಂಡಲದ ಸಿಬ್ಬಂದಿಯವರಿಗೆ ಅಲ್ಲಿನ ಆರ್ಥಿಕ ಮಂತ್ರಿಗಳು ಒಂದು ತಿಂಗಳ ಸಂಬಳವನ್ನು ಅವರಿಗೆ ಬೋನಸ್ಸಾಗಿ ಕೊಡಲು ಒಪ್ಪಿ ಕೊಟ್ಟಿದ್ದಾರೆ. ಇದರ ಬಗ್ಗೆ ಪೇಪರುಗಳಲ್ಲಿ ಸುದ್ದಿ ಕೂಡ ಬಂತು ಎಂದು ನಾವು ಸರಕಾರದ ಗಮನ ಸೆಳೆದಿದ್ದೇವೆ. ಸರಕಾರ ಇದರ ಬಗ್ಗೆ ಕೇಳಿದಾಗ ಮಾನ್ಯ ಸಚಿವರು ಕೂಡ ಇದನ್ನು ಪರಿಶೀಲಿಸಿ ಕೊಡಬಹುದು ಎಂದು ಹೇಳಿದ್ದರು. ಇದರ ಬಗ್ಗೆ ಸರಕಾರ ಏನು ನಿರ್ಧಾರ ಮಾಡಿದೆ ಎನ್ನುವುದನ್ನು ಇಲ್ಲಿ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.— ಸ್ವಾಮಿ, ವಿಧಾನ ಮಂಡಲದ ಸಿಬ್ಬಂದಿ ವರ್ಗದವರು ಬೆಳಿಗ್ಗೆ ಏಳು ಗಂಟೆಗೆ ಬಂದರೆ ರಾತ್ರಿ ೮-೯ಗಂಟೆವರೆಗೆ ಕೆಲಸಮಾಡುತ್ತಿರುತ್ತಾರೆ. ಇಂತಹವರ ಬಗ್ಗೆ ಸರಕಾರ ಸ್ವಲ್ಪ ಉದಾರ ನೀತಿ ಅನುಸರಿಸಿ ಇವರಿಗೆ ಆಂಧ್ರ ಸರಕಾರ ಕೊಟ್ಟಿರುವಂತೆ ಒಂದು ತಿಂಗಳ ಸಂಬಳವನ್ನು ಬೋನಸ್ಸು ರೂಪದಲ್ಲಿ ಕೊಡಬಹುದು ಎಂದು ನಾವು ಇಲ್ಲಿ ಸರಕಾರದ ಗಮನ ಸೆಳೆದಿದ್ದೆವು ಮತ್ತು ಸರಕಾರ ಇದನ್ನು ಮಾಡಬಹುದು ಎಂದು ಆಶ್ವಾಸನೆ ಕೂಡ ಕೊಟ್ಟಿತ್ತು. ಇದನ್ನು ಕೊಡಬೇಕಾದುದು ಬಹಳ ಮುಖ್ಯ.

ಶ್ರೀ ಎಸ್. ಎಂ. ಕೃಷ್ಣ.— ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀ ಕೃಷ್ಣಪ್ಪನವರು ಹಾಗೂ ಶ್ರೀ ಕೋಣಂದೂರು ಲಿಂಗಪ್ಪನವರು ಮಾಡಿರತಕ್ಕ ಸಲಹೆಯನ್ನು ಪರಿಶೀಲನೆ ಮಾಡಿ ಮಾನ್ಯ ಅರ್ಥ ಸಚಿವರೊಡನೆ ಮತ್ತು ಮುಖ್ಯಮಂತ್ರಿಗಳೊಡನೆ ಇದರ ಬಗ್ಗೆ ಮಾತನಾಡಿ ತಕ್ಕ ಕ್ರಮಗಳನ್ನು ತೆಗೆದು ಕೊಳ್ಳಬೇಕಾಗುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಕಳೆದ ವರ್ಷ ಇದೇ ಕಾಲದಲ್ಲೇ ನಾವು ಇದೇ ವಿಚಾರಗಳನ್ನು ಸರಕಾರದ ಗಮನಕ್ಕೆ ತಂದಾಗ ಸರಕಾರ ಆಶ್ವಾಸನೆ ಕೊಟ್ಟು ಇದನ್ನು ಕೊಡಲು ಒಪ್ಪಿದ್ದರು. ಈಗ ಮತ್ತೇ ಅವರು ಕೊಟ್ಟ ಭರವಸೆಯನ್ನು ಪೂರ್ಣ ಮಾಡಬೇಕೆಂದು ಕೇಳುತ್ತಿರುವುದು. ಈಗ ಮತ್ತೆ ಪರಿಶೀಲನೆ ಮಾಡುತ್ತೇವೆಂದರೆ ಏನರ್ಥ ಇದು ? ಭರವಸೆ ಕೊಟ್ಟಿರುವುದರಿಂದ ಇನ್ನೆರಲ್ಲಿ ಮತ್ತೆ ಪರಿಶೀಲನೆ ಮಾಡುವ ಅವಶ್ಯಕತೆ ಇಲ್ಲ ವಿಧಾನ ಮಂಡಲದ ಸಿಬ್ಬಂದಿ ವರ್ಗದವರಿಗೆ ಆರ್ಥಿಕ ರಿಯಾಯಿತಿಗಳನ್ನು ಕೊಡುವುದರ ಬಗ್ಗೆ ಕೊಡುತ್ತೇವೆ, ಎಂದು ಸ್ಪಷ್ಟವಾದ ಭರವಸೆ ಕೊಡಲಾಗಿತ್ತು. ಮತ್ತೆ ಇದನು ಪರಿಶೀಲನೆ ಮಾಡುವುದು ಎಂದರೆ ಎಂತು ? ಸರಕಾರ ಕೊಟ್ಟ ಭರವಸೆಯನ್ನು ಪೂರೈಸಲೇ ಬೇಕು.

ಶ್ರೀ ಕೋಣಂದೂರು ಲಿಂಗಪ್ಪ.— ಹಿಂದೆ ಸರಕಾರವೇ ಒಪ್ಪಿತ್ತು.

SRI S. M. KRISHNA.— This matter has to go before the Cabinet and we will certainly take a decision Then with reference to the earlier point raised by the Leader of Opposition we shall meet and discuss it.